ಶ್ರೀ ಜೆ. ಡಿ. ಸೋಮಪ್ಪ.—ಅಧ್ಯಕ್ಷರೇ ಇದು ಮಾನ್ಯ ಮಂತ್ರಿಗಳ ಜಿಲ್ಲೆಯಾಗಿದೆ.

ವಿಷಯ ; (viii) ಕೊಡಗಿನಲ್ಲಿ ರೈತರು ಬೆಳೆದಂಥ ಭತ್ತವನ್ನು ಸೀಸ್ ಮಾಡಿರುವ ಬಗ್ಗೆ

ಶ್ರೀ ಕೆ. ರಾಮಭಟ್ (ಪುತ್ತೂರು).—ಕೊಡಗಿನಲ್ಲಿ ರೈತರು ಬೆಳೆದಂತಹ ಭತ್ತವನ್ನು ಮಾರ್ಕೆಟಿಂಗ್ ಫೆಡರೇಶನ ಗೋಡೌನ್‌ನಲ್ಲಿ ಇಟ್ಟಿದ್ದಾರೆ. ತರೀಕೆರೆಯಲ್ಲಿ ಕೂಡ ಈ ರೀತಿ ಇಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಅಧಿಕಾರಿಗಳು ಇಲ್ಲಿ ಲೆವಿ ಇಲ್ಲದಿದ್ದಾಗ್ಯೂ ರೈತರ ಭತ್ತವನ್ನು ಸೀಸ್ ಮಾಡಿದ್ದಾರೆ. ಇದರ ವಿರುದ್ಧ ರೈತರು ಮನವಿಗಳನ್ನು ಕೊಟ್ಟಿದ್ದಾರೆ. ಅವರಿಗೆ ಸೀಸ್ ಮಾಡಿದ ಭತ್ತವನ್ನು ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಇನ್ನೂ ತನಕ ಆ ಆಶ್ವಾಸನೆಯನ್ನು ಈಡೇರಲಿಲ್ಲ. ಇದರ ಪರಿಣಾಮವಾಗಿ ರೈತ ಸಂಘಕ್ಕೆ ಬೆಂಬಲ ಸಿಕ್ಕಂತೆ ಆಗಿದೆ. ಸರಕಾರ ತಾನು ಕೊಟ್ಟಂತಹ ಮಾತಿನಂತೆ ನಡೆದುಕೊಂಡು ತತ್‌ಕ್ಷಣ ಸೀಸ್ ಮಾಡಿರುವ ಭತ್ತವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ 23-2-1984ರಂದು ಸಭೆಯಲ್ಲಿ ಪ್ರಸ್ತಾಪ ಮಾಡಲಾಗಿದ್ದು, ಸರಕಾರ ಆಜ್ಞೆಯನ್ನು ಹೊರಡಿಸಿದೆ. ರೈತರು ಭತ್ತವನ್ನು ಸೊಸೈಟಿಯಲ್ಲಿ ಏನು ಪ್ಲೆಡ್ಜ್ ಮಾಡಿದ್ದಾರೆ, ಅದನ್ನು ಅಧಿಕಾರಿಗಳು ಸೀಸ್ ಮಾಡಿದ್ದಾರೆ. ಅದನ್ನೂ ಬಿಡುಗಡೆ ಮಾಡಬೇಕೆಂದು ಜಿಲ್ಲಾ ಅಧಿಕಾರಿಗಳಿಗೆ ನಾನು ಡೈರೆಕ್ಷನ್ ಕೊಟ್ಟಿದ್ದೇನೆ. ನನಗೆ ಬಂದ ವರ್ತಮಾನದ ಪ್ರಕಾರ ಈಗಾಗಲೇ ಆ ಭತ್ತವನ್ನು ಬಿಡುಗಡೆ ಮಾಡಿದ್ದಾರೆ.

ಶ್ರೀ ಕೆ. ರಾಮಭಟ್.—ನನಗೆ ಬಂದ ಮಾಹಿತಿ ಪ್ರಕಾರ ಇನ್ನೂ ಆ ಭತ್ತವನ್ನು ಬಿಡುಗಡೆ ಮಾಡಲಿಲ್ಲ.

ಶ್ರೀ ಕೆ. ಎಸ್. ಕಾಳಮರಿಗೌಡ.—ಸರಕಾರ ಕೆಲವು ಜನ ಅಸಿಸ್ಟೆಂಟ್ ಕಮಿಷನರ್‌ಗಳನ್ನು ನೇಮಕ ಮಾಡಿದ್ದರು. There is a G. O. issued in 1983. Accordingly they cought to have considered the list while giving promotions. 1975ರಲ್ಲಿ, ಅಸಿಸ್ಟೆಂಟ್ ಕಮಿಶನರ್ಸ್ ಆಗಿ ಆಯ್ಕೆ ಆದವರಿಗೆ ಇದುವರೆಗೂ ಕೂಡಾ ಪ್ರಮೋಷನ್ ಆಗಲಿಲ್ಲ. ಪ್ರಮೋಷನ್ ಸಿಗದಿದ್ದಾಗ, ಅವರು ಕೋರ್ಟಿಗೆ ಹೋಗಿ ಹೈಕೋರ್ಟಿನವರು ಸರಕಾರದವರು ಮಾಡಿರತಕ್ಕ ಲಿಸ್ಟ್‌ನಿಂದ ಅವರಿಗೆ ಅನ್ಯಾಯವಾಗಿದೆ, ಇನ್ನೊಂದು ಗ್ರೇಡೇಷನ್ ಲಿಸ್ಟ್ ತಯಾರು ಮಾಡಬೇಕೆಂದು ಆದೇಶ ಕೊಟ್ಟಿದ್ದು, ಇದಲ್ಲದೆ ಇನ್ನೂ ಕೆಲವು ವಿವರಗಳನ್ನು ಕೊಡಬೇಕೆಂದು ಹೈಕೋರ್ಟಿನವರು ಸರಕಾರವನ್ನು ಕೇಳಿದ್ದರು. 18-4-1983ರಲ್ಲಿ ಸೀನಿಯಾರಿಟಿ ಲಿಸ್ಟ್‌ನ್ನು ಮಾಡಿದ್ದಾರೆ.

ಅಧ್ಯಕ್ಷರು.—ತಾವು ವಿವರಕ್ಕೆ ಹೋಗುವುದು ಬೇಡ.

(ix) ವಾಣಿಜ್ಯ ತೆರಿಗೆ ಸಹಾಯಕ ಅಧಿಕಾರಿಗಳ ಬಡ್ತಿ ಬಗ್ಗೆ

ಶ್ರೀ ಬೈರಪ್ಪಾಜಿ.—ಮಾನ್ಯ ಅಧ್ಯಕ್ಷರೆ, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಬಡತಿ ಆಧಾರದ ಮೇಲೆ ವಾಣಿಜ್ಯ ತೆರಿಗೆ ಸಹಾಯಕ ಅಧಿಕಾರಿಗಳು 53 ಜನರಿದ್ದು ಅವರುಗಳು ಬಡತಿಗೆ ಅರ್ಹರಾಗಿದ್ದರೂ ಕೂಡಾ, 13-14 ವರ್ಷಗಳ ಸರ್ವಿಸ್ ಇದ್ದರೂ, ಅವರಿಗೆ ಪ್ರಮೋಷನ್ ಕೊಡದೆ, ಈಚೆಗೆ ಸುಮಾರು ಐದು ವರ್ಷಗಳಿಂದ ಪ್ರೊಬೇಷನರ್ಸ್ ಆಗಿ ಬಂದಂತಹವರಿಗೆ ಪ್ರಮೋಷನ್ ಕೊಡಬೇಕೆಂದು ಹೇಳಿ ವಾಣಿಜ್ಯ ತೆರಿಗೆಯವರು ಸರಕಾರಕ್ಕೆ ಒಂದು ಪಟ್ಟಿಯನ್ನು ಕಳುಹಿಸಿರುತ್ತಾರೆ. ಈ ಪಟ್ಟಿ ದೋಷ ಪೂರಿತವಾಗಿದ್ದು, ಸರಕಾರ ಇದರ ಬಗ್ಗೆ ಗಮನ ಹರಿಸಬೇಕು. ಮತ್ತು 53 ಮಂದಿ ಏನಿದ್ದಾರೆ ಅವರ ಪಟ್ಟಿಯನ್ನು ಮತ್ತು 61 ಮಂದಿ ಪ್ರೊಬೇಷನರ್ಸ್ ಏನಿದ್ದಾರೆ ಅವರ ಪಟ್ಟಿಯನ್ನೂ ಸಹ ಮುಖ್ಯ ಮಂತ್ರಿಗಳು ತರಿಸಿಕೊಂಡು ನೋಡಬೇಕು. ಆರ್ಡರ್ ನಂಬರ್, ಡಿ.ಪಿ.ಎ.ಆರ್. 35 : 86. ಕ್ರಮಾಂಕ, 10. ಈ ಸರಕಾರಿ ಆಜ್ಞೆ ಪ್ರಕಾರ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಗಮನಕ್ಕೆ ತರಬಯಸುತ್ತೇನೆ. ಇದು ದೊಡ್ಡ ಇಲಾಖೆ. ಸರಕಾರಕ್ಕೆ ಆದಾಯ ಬರತಕ್ಕಂತಹ ಇಲಾಖೆ.

ಇಲ್ಲಿ ತಾರತಮ್ಯ ಮಾಡಿದರೆ, ಒಬ್ಬರಿಗೊಂದು, ಒಬ್ಬರಿಗೊಂದು ಮಾಡಿದರೆ, ಇಲ್ಲಿ ಕೆಲಸಕ್ಕೆ ಸ್ಥಗಿತವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ತಾವುಗಳು ಈ ಅಂಶವನ್ನು ಕೂಲಂಕುಷವಾಗಿ ಗಮನಿಸಬೇಕು. ಪ್ರೊಬೇಷನರ್ಸ್ ಮತ್ತು ಪ್ರಮೋಷನರ್ಸ್ ಲಿಸ್ಟ್‌ನ್ನು ಏಕಕಾಲದಲ್ಲಿ ತರಿಸಿಕೊಂಡು ಸರಕಾರಿಯ ಆಜ್ಞೆಯ ಪ್ರಕಾರ ತೀರ್ಮಾನವನ್ನು ತೆಗೆದುಕೊಳ್ಳಬೇಕು ಮತ್ತು ಆ ಇಲಾಖೆಯಲ್ಲಿ ತಲೆದೂರಿರತಕ್ಕ ತಾರತಮ್ಯವನ್ನು ಸರಿಪಡಿಸಬೇಕೆಂದು ಹೇಳಿ, ನಾನು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.